230 (407): ಶ್ರೀ ಮೋಹನ್ ಕೃಷ್ಣಶೆಟ್ಟಿ (ಕುಮಟ)

ಶ್ರೀ ಹೆಚ್.ಡಿ. ಕುಮಾರಸ್ವಾಮಿ (ಮಾನ್ಯ ಮುಖ್ಯ ಮಂತ್ರಿಗಳು) ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವವರು.

ಅ. 1999ರ ಪೂರ್ವದಲ್ಲಿ ಕರಾವಳಿ ತಾಲ್ಲೂಕುಗಳ ಪಟ್ಟಣಗಳಿಗೆ ಸೀಮಿತವಾಗಿ ಮೂಲಭೂತ ಸೌಕರ್ಯ ಅಭಿವೃದ್ಧಿಗಾಗಿ ಎ.ಡಿ.ಬಿ ಯೋಜನೆ ಅಳವಡಿಸಿದ್ದು ನಿಜವಲ್ಲವೇ;

ಆ. ಹಾಗಿದ್ದಲ್ಲಿ ಈ ಯೋಜನೆಯಲ್ಲಿ ಕುಮಟಾ–ಹೊನ್ನಾವರ ಪಟ್ಟಣಗಳನ್ನು ಕೈಬಿಟ್ಟು ಬೇರೆಡೆ ಸ್ಥಳಾಂತರಿಸಿದ್ದರಿಂದ ಸದರಿ ಪಟ್ಟಣಗಳು ಈ ಸವಲತ್ತಿನಿಂದ ವಂಚಿತವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ. ಹಾಗಿದ್ದಲ್ಲಿ ಈಗಾಗಲೇ ಪುನಃ ಮನವಿ ಮಾಡಿದಂತೆ ಕುಮಟಾ ಮತ್ತು ಹೊನ್ನಾವರ ಪಟ್ಟಣಕ್ಕೆ ಕೆ.ಎಂ.ಆರ್.ಪಿ ಯೋಜನೆಯನ್ನು ಅಳವಡಿಸಿ ಅಭಿವೃದ್ಧಿಗೆ ಯಾವಾಗ ನೆರವು ನೀಡಲಾಗುವುದು;

ಈ. ಈ ಬಗ್ಗೆ ಕೈಗೊಳ್ಳುವ ಕ್ರಮಗಳೇನು?

ಶ್ರೀ ಹೆಚ್.ಡಿ. ಕುಮಾರಸ್ವಾಮಿ (ಮಾನ್ಯ ಮುಖ್ಯ ಮಂತ್ರಿಗಳು)

ಅ. ಇಲ್ಲ.

ಆ. ಇಲ್ಲ

ಇ.ಈ. ಕೆ.ಎಂ.ಆರ್.ಪಿ ಯೋಜನೆಯಡಿಯಲ್ಲಿ ಈಗಾಗಲೇ ರಾಜ್ಯದ ನಗರ ಸ್ಥಳೀಯ ಸಂಸ್ಥೆಗಳನ್ನು ಅರ್ಹತಾಮಾನದಂಡದ ಆಧಾರದ ಮೇಲೆ ಆಯ್ಕೆ ಮಾಡಲಾಗಿದ್ದು ಇದರಲ್ಲಿ ಕುಮಟಾ ಮತ್ತು ಹೊನ್ನಾವರ ಪಟ್ಟಣಗಳು ಆಯ್ಕೆಯಾಗಿರುವುದಿಲ್ಲ.

232 (429): ಶ್ರೀ ಸಿಂಗಪ್ಪ ಹೆಚ್.(ಕುಣಿಗಲ್)

ಶ್ರೀ ಹೆಚ್.ಡಿ. ಕುಮಾರಸ್ವಾಮಿ (ಮುಖ್ಯಮಂತ್ರಿಗಳು) ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವವರು.

ಅ. ಪ್ರತಿ ಹಳ್ಳಿಗಳಲ್ಲಿ ಸ್ತ್ರೀಶಕ್ತಿ ಸಂಘದ ಸದಸ್ಯರು ಸಭೆ ಸಮಾರಂಭ ನಡೆಸಲು ಅನುಕೂಲವಾಗುವಂತೆ ಅವಶ್ಯಕ ಸ್ತ್ರೀಶಕ್ತಿ ಭವನ ನಿರ್ಮಿಸಿಕೊಂಡುವ ಆಲೋಚನೆ ಸರ್ಕಾರಕ್ಕೆ ಇದೆಯೇ;

ಆ. ಹಾಗಿದ್ದಲ್ಲಿ ಅದನ್ನು ಪ್ರಸಕ್ತ ಸಾಲಿನಿಂದಲೇ ಪ್ರಾರಂಭಿಸಲಾಗುವುದೇ?